**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಹೊಳಲ್ಕೆರೆ.**

**ಸಿ.ಸಿ.113/2016**

| | | | |
|---|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ. ಜ್ಯೋತಿಶ್ರೀ | ಪ್ರಾಸಾಃ1 |
| ತಂದೆಯ ಹೆಸರು | : | ಎಂ.ಜಿ.ರಾಮ್‌ದಾಸ್ | ಚಾಸಾಃ1 |
| ವಯಸ್ಸು | : | 36 ವರ್ಷ | |
| ಕೆಲಸ | : | ಗೃಹಿಣಿ | ಸಾ ಪ್ರ ಬೋ |
| ವಾಸ | : | ಮಲ್ಲಾಡಿಹಳ್ಳಿ ಗ್ರಾಮ | ದಿಃ06.02.2026 |

**ಮುಖ್ಯ ವಿಚಾರಣೆ : ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷ್ಯ:**

1. ಚಾಸಾ-2 ಮತ್ತು 3 ಗೊತ್ತಿಲ್ಲ. ಚಾಸಾ-4 ನನ್ನ ತಂದೆ, ಚಾಸಾ-5 ನನ್ನ ತಾಯಿ, ಚಾಸಾ-6 ರಿಂದ 9 ನನ್ನ ತಂದೆಯ ಸ್ನೇಹಿತರು. 1 ನೇ ಆರೋಪಿ ನನ್ನ ಪತಿ.

2. ನನ್ನ ಮತ್ತು 1 ನೇ ಆರೋಪಿ ವಿವಾಹ ದಿನಾಂಕ 17.02.2010 ರಂದು ಮಲ್ಲಾಡಿಹಳ್ಳಿ ಬನಶಂಕರಿ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ. ವಿವಾಹದ ನಂತರ ನಾನು ಮತ್ತು ನನ್ನ ಪತಿಯಾದ 1 ನೇ ಆರೋಪಿ ಭದ್ರಾವತಿಯ ಅವರ ಮನೆಯಲ್ಲಿ ವಾಸವಾಗಿದ್ದೇವು. 1 ವರ್ಷದ ನಂತರ ನಾನು ನನ್ನ ತಾಯಿಯ ಮನೆಗೆ ಬಂದು ನನ್ನ ತವರು ಮನೆಯಲ್ಲಿಯೇ ಇದ್ದೇನೆ. 1 ನೇ ಆರೋಪಿ ನನ್ನನ್ನು ಕರೆದುಕೊಂಡು ಹೋಗುವುದಾಗಿ ಹೇಳಿದ್ದು, ಆದಾಗ್ಯೂ ಕರೆದುಕೊಂಡು ಹೋಗಿಲ್ಲ. 1 ನೇ ಆರೋಪಿ ನನಗೆ ಕಿರುಕುಳ ನೀಡುತ್ತಿರಲಿಲ್ಲ. ಈ ಕುರಿತು ನಾನು ಯಾವುದೇ ದೂರನ್ನು ನೀಡಿಲ್ಲ. ಸಾಕ್ಷಿ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು, ನನ್ನ ಸಮಕ್ಷಮ ಯಾವುದೇ ಮಹಜರಿನ ಕ್ರಮವನ್ನು ಜರುಗಿಸಿಲ್ಲ. ಸಾಕ್ಷಿ ಮಹಜರಿನಲ್ಲಿನ ಸಹಿಯನ್ನು ಗುರುತಿಸಿದ್ದು, ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಎ.ಪಿ.ಪಿ.ಯವರಿಂದಃ</u>**

3. ದಿನಾಂಕ 17.02.2010 ರಂದು ನನ್ನ ಮತ್ತು 1 ನೇ ಆರೋಪಿತನ ವಿವಾಹದ ನಂತರದ 2 ವರ್ಷಗಳ ಬಳಿಕ ನನಗೆ ಮಕ್ಕಳಾಗಿಲ್ಲ ಎಂಬ ವಿಚಾರವಾಗಿ 1 ನೇ ಆರೋಪಿ ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಸದರಿ ಹಿಂಸೆಯನ್ನು ಸಹಿಸಿಕೊಂಡು ಹೋಗುತ್ತಿದ್ದು, ಪದೇ ಪದೇ ಕಿರುಕುಳ ನೀಡುತ್ತಿದ್ದ ಕಾರಣ 1 ನೇ ಆರೋಪಿತನ ಕಿರುಕುಳವನ್ನು ಸಹಿಸದೇ ನಾನು ನನ್ನ ತವರು ಮನೆಗೆ ಬಂದೆನು ಎಂದರೆ ಸರಿಯಲ್ಲ. ದಿನಾಂಕ 24.08.2013 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ನಾನು ನನ್ನ ತಂದೆಯಾದ ಚಾಸಾ-4 ರವರ ಮನೆಯಲ್ಲಿ ಇದ್ದಾಗ, 1 ನೇ ಆರೋಪಿ ನಮ್ಮ ಮನೆಯ ಬಳಿ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೈ ಮತ್ತು ಕಾಲುಗಳಿಂದ ಹೊಡೆದು, ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 25.08.2013 ರಂದು ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರು ದಾಖಲಾದ ನಂತರ ದಿನಾಂಕ 28.05.2013 ರಂದು ನನ್ನ ತಂದೆಯ ಮನೆಯಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಸಂಜೆ 04.00 ರಿಂದ 04.45 ರವರೆಗೆ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಆರೋಪಿ 2013 ರಿಂದ ಎಲ್ಲಿ ಇದ್ದಾರೆ ಎಂದು ಗೊತ್ತಿಲ್ಲ ಹಾಗೂ 1 ನೇ ಆರೋಪಿತರ ತಂದೆ-ತಾಯಿ ಮೃತಪಟ್ಟಿದ್ದು, ಆಗಲೂ ಸಹ 1 ನೇ ಆರೋಪಿ ಬಂದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.